ದಿನಾಂಕ: 29-09-2011ರಂದು ಪೂರ್ವಾಹ್ನ: 11-00 ಗಂಟೆಗೆ ಹೊಯ್ಸಳ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

ಅಧ್ಯಕ್ಷತೆ: ಶ್ರೀ ಎಂ.ಕೆ.ದ್ಯಾವಯ್ಯ

ಅಧ್ಯಕ್ಷರು

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

ಹಾಜರಿ :07

ಗೈರು ಹಾಜರಿ:00

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
|---|---|---|---|
| | | ಉಪ ಕಾರ್ಯದರ್ಶಿ(ಆಡಳಿತ) ರವರು ಸಭೆಗೆ ಹಾಜರಿದ್ದ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಅಧ್ಯಕ್ಷರನ್ನು ಕೋರಿದರು. | |
| | | **ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ:**<br>ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ಗುರುದೇವ್ ರವರು ಮಾತನಾಡುತ್ತಾ, ಸಕಲೇಶಪುರ ನಗರದಲ್ಲಿರುವ ವಿದ್ಯಾರ್ಥಿನಿಲಯಗಳಲ್ಲಿ ಯಾವುದೇ ಸಮಯದಲ್ಲಿ ವಿದ್ಯಾರ್ಥಿನಿಲಯಕ್ಕೆ ಹೋದರೂ ಮೇಲ್ವಿಚಾರಕರು ಇರುವುದಿಲ್ಲ. ಈ ಬಗ್ಗೆ ಹಿಂದುಳಿದ ವರ್ಗಗಳ ಅಧಿಕಾರಿಯವರು ಕ್ರಮ ವಹಿಸಬೇಕೆಂದು ಕೋರಿದರು.<br>ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಇಲಾಖೆರವರು ಮಾತನಾಡುತ್ತಾ, ಇಲಾಖೆಯಡಿ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಮೇಲ್ವಿಚಾರಕರ ಹುದ್ದೆಗಳು ಬಹುತೇಕ ಖಾಲಿಯಿದ್ದು ಒಬ್ಬೊಬ್ಬ ಮೇಲ್ವಿಚಾರಕರಿಗೆ 3-4 ವಿದ್ಯಾರ್ಥಿನಿಲಯಗಳನ್ನು ವಹಿಸಲಾಗಿದೆ. ಆದ್ದರಿಂದ, ಮೇಲ್ವಿಚಾರಕರು ಯಾವ ಸಮಯದಲ್ಲಿ ಯಾವ ವಿದ್ಯಾರ್ಥಿನಿಲಯಗಳಲ್ಲಿರುತ್ತಾರೆ ಎಂದು ಗೊತ್ತಾಗುವುದಿಲ್ಲವೆಂದು ಸಭೆಗೆ ವಿವರ ನೀಡಿದರು.<br>ಉಪ ಕಾರ್ಯದರ್ಶಿ(ಆಡಳಿತ)ರವರು ಮಾತನಾಡುತ್ತಾ, ಮೇಲ್ವಿಚಾರಕರಿಗೆ ವೇಳಾಪಟ್ಟಿಯನ್ನು ನೀಡಿ ಯಾವ ಸಮಯದಲ್ಲಿ ಯಾವ ವಿದ್ಯಾರ್ಥಿನಿಲಯದಲ್ಲಿ ಕಾರ್ಯನಿರ್ವಹಿಸುತ್ತಾರೆ ಎಂಬ ಬಗ್ಗೆ ವಿವರ ಪಡೆದು ಸಮಿತಿ ಅಧ್ಯಕ್ಷರು ಮತ್ತು ಸದಸ್ಯರ ಗಮನಕ್ಕೆ ತರಬೇಕೆಂದು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಇಲಾಖೆ ಮತ್ತು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿರವರಿಗೆ ತಿಳಿಸಿದರು.<br>ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ಹೆಣ್ಣುಮಕ್ಕಳ ವಿದ್ಯಾರ್ಥಿನಿಲಯಗಳಿಗೆ ಮಹಿಳಾ ಮೇಲ್ವಿಚಾರಕಿಯರನ್ನೇ ನೇಮಕ ಮಾಡುವುದು ಸೂಕ್ತವೆಂದು ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಕೋರಿದರು.<br>ಉಪಕಾರ್ಯದರ್ಶಿ(ಆಡಳಿತ)ರವರು ಮಾತನಾಡುತ್ತಾ, ದುರ್ನಡತೆಯುಳ್ಳ ಮೇಲ್ವಿಚಾರಕರು ಮತ್ತು ಅಡುಗೆ ಸಿಬ್ಬಂದಿಯವರ ಮೇಲೆ ಶಿಸ್ತುಕ್ರಮ ಜರುಗಿಸಲು ಕ್ರಮವಹಿಸುವಂತೆ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಹಾಗೂ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರಿಗೆ ತಿಳಿಸಿದರು. | ಸಭೆಯಲ್ಲಿ ಚರ್ಚಿಸಿದಂತೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಇಲಾಖೆಯ ವತಿಯಿಂದ ನಡೆಯುತ್ತಿರುವ ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಮಹಿಳಾ ಮೇಲ್ವಿಚಾರಕರನ್ನೇ ನೇಮಕ ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |

ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆರವರು ಮಾತನಡುತ್ತಾ, ಹಿಂದುಳಿದ ವರ್ಗಗಳ ಸಮುದಾಯ ಭವನ ನಿರ್ಮಾಣಕ್ಕಾಗಿ ಕೇಂದ್ರ ಕಛೇರಿಯಿಂದ ರೂ.5,00,000/-ಗಳ ಸಹಾಯಧನವನ್ನು ಮತ್ತು ಅಲ್ಪಸಂಖ್ಯಾತರ ಇಲಾಖೆಯ ವತಿಯಿಂದ ಶಾದಿಮಹಲ್ ನಿರ್ಮಾಣಕ್ಕಾಗಿ ಜಿಲ್ಲಾ ಮಟ್ಟಕ್ಕೆ ರೂ.50,00,000/-ಗಳು, ತಾಲ್ಲೂಕು ಮತ್ತು ಇತರೆ ಮಟ್ಟಕ್ಕೆ ರೂ.25,00,000/-ಗಳ ಸಹಾಯಧನವನ್ನು ನೀಡಲಾಗುತ್ತಿದೆ. ಜಿಲ್ಲಾ ಪಂಚಾಯಿತಿ ಸದಸ್ಯರುಗಳು ಎಲ್ಲೆಲ್ಲಿ ಶಾದಿಮಹಲ್ ಮತ್ತು ಸಮುದಾಯ ಭವನಗಳ ಅವಶ್ಯಕತೆಯಿರುತ್ತವೆ ಎಂಬ ಬಗ್ಗೆ ತಿಳಿಸಿದಲ್ಲಿ ಕೇಂದ್ರ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ವಹಿಸುವುದಾಗಿ ಸಭೆಗೆ ವಿವರ ನೀಡಿದರು.

**<u>ಸಮಾಜ ಕಲ್ಯಾಣ ಇಲಾಖೆ:</u>**

ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ಗುರುದೇವ್‌ರವರು ಮಾತನಾಡುತ್ತಾ, ಹಾಸನ ನಗರದ ಆರ್.ಸಿ ರಸ್ತೆಯಲ್ಲಿರುವ ವಿದ್ಯಾರ್ಥಿನಿಲಯವು ಕ್ರಿಶ್ಚಿಯನ್ ಒಡೆತನದ ಕಟ್ಟಡದಲ್ಲಿ ನಡೆಯುತ್ತಿದ್ದು, ಅದರ ಮಾಲೀಕರು ವಿದ್ಯಾರ್ಥಿಗಳಿಗೆ ಕ್ರಿಶ್ಚಿಯನ್ ಮತಕ್ಕೆ ಮತಾಂತರ ಹೊಂದುವಂತೆ ಒತ್ತಾಯಿಸುತ್ತಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಈ ಬಗ್ಗೆ ಕ್ರಮ ವಹಿಸಬೇಕೆಂದು ಕೋರಿದರು.

ಮುಂದುವರದು, ಯಲಗುಂದ ನಿಟ್ಟೂರಿನಲ್ಲಿರುವ ವಿದ್ಯಾರ್ಥಿನಿಲಯವು ಸಹ ಸಮರ್ಪಕವಾಗಿ ನಡೆಯುತ್ತಿಲ್ಲ. ಈ ವಿದ್ಯಾರ್ಥಿನಿಲಯದ ಪರಿಶೀಲನೆ ನಡೆಸಿ ಕ್ರಮ ವಹಿಸಬೇಕೆಂದು ಕೋರಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಪಾರ್ವತಮ್ಮರವರು ಮಾತನಾಡುತ್ತಾ, ಪಶುಪಾಲನಾ ಇಲಾಖೆಯ ವತಿಯಿಂದ ಜಾನುವಾರುಗಳ ತಪಾಸಣೆಗೆ ಸಂಚಾರಿ ಆರೋಗ್ಯ ಘಟಕಗಳ ವ್ಯವಸ್ಥೆಯಿದ್ದು, ಯಾವ ದಿನಾಂಕಗಳಂದು ಸಂಚಾರಿ ಆರೋಗ್ಯ ಘಟಕಗಳು ಬರುತ್ತವೆ ಎಂಬ ಬಗ್ಗೆ ಜಿಲ್ಲಾ ಪಂಚಾಯಿತಿ ಸದಸ್ಯರುಗಳಿಗೆ ಮಾಹಿತಿಯಿರುವುದಿಲ್ಲ. ಆದ್ದರಿಂದ, ಈ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಕೋರಿದರು.

ಉಪ ಕಾರ್ಯದರ್ಶಿ(ಆಡಳಿತ)ರವರು ಮಾತನಾಡುತ್ತಾ, ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪುಸ್ತಕ ಭಂಡಾರ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಪುಸ್ತಕ ಭಂಡಾರ ಯೋಜನೆಯಡಿ ಟೆಂಡರ್ ಕರೆದು ಸಮಿತಿಯ ಗಮನಕ್ಕೆ ತರಬೇಕೆಂದು ತಿಳಿಸಿದರು.

ಮುಂದುವರೆದು, ಮುಂದಿನ ಸಭೆಗೆ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಗೆ ಸಂಬಂಧಿಸಿದಂತೆ, ಪ್ರತಿ ತಾಲ್ಲೂಕಿನಲ್ಲಿ ಆಯ್ಕೆ ಮಾಡಿರುವ ಗ್ರಾಮಗಳ ಮತ್ತು ಫಲಾನುಭವಿಗಳ ವಿವರಗಳನ್ನು ಒದಗಿಸಲು ಕ್ರಮ ವಹಿಸುವಂತೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರಿಗೆ ತಿಳಿಸಿದರು.

**<u>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:</u>**

ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ಗುರುದೇವ್‌ರವರು ಮಾತನಾಡುತ್ತಾ, ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡ ಮತ್ತು ಶೌಚಾಲಯಗಳು ಇರುವುದಿಲ್ಲ. ಸ್ವಂತ ಕಟ್ಟಡ ಮತ್ತು ಶೌಚಾಲಯ ನಿರ್ಮಾಣಕ್ಕೆ ಅಗತ್ಯ ಕ್ರಮ ವಹಿಸುವಂತೆ ಕೋರಿದರು.

ಉಪ ಕಾರ್ಯದರ್ಶಿ (ಆಡಳಿತ)ರವರು ಮಾತನಾಡುತ್ತಾ, ನಬಾರ್ಡ್ ವತಿಯಿಂದ ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು, ಘಟಕ ವೆಚ್ಚ ರೂ.3.68ಲಕ್ಷಗಳಲ್ಲಿ ನಿರ್ಮಿಸಲು ಕರ್ನಾಟಕ ಮೂಲಸೌಕರ್ಯಗಳ ಅಭಿವೃದ್ಧಿ ಇಲಾಖೆರವರಿಗೆ ನೀಡಲಾಗಿದೆ ಎಂದು ಸಭೆಗೆ ವಿವರ ನೀಡಿದರು.

ಮುಂದುವರೆದು, ಘನ ಸರ್ವೋಚ್ಚ ನ್ಯಾಯಾಲಯವು ಎಲ್ಲಾ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಕಡ್ಡಾಯವಾಗಿ ಶೌಚಾಲಯಗಳನ್ನು ನಿರ್ಮಿಸಲು ನಿರ್ದೇಶನ ನೀಡಿದ್ದು, ಅದರಂತೆ, ಸಂಪೂರ್ಣ ಸ್ವಚ್ಛತಾ ಆಂದೋಲನದಡಿ

| | | | |
|---|---|---|---|
| | | ಸ್ವಂತ ಕಟ್ಟಡ ಹೊಂದಿರುವ ಅಂಗನವಾಡಿ ಕೇಂದ್ರಗಳಿಗೆ ಶೌಚಾಲಯ ನಿರ್ಮಾಣಕ್ಕಾಗಿ ರೂ.8000/-ಗಳನ್ನು ನೀಡಲಾಗುತ್ತಿದೆ ಎಂದು ವಿವರ ನೀಡಿದರು.<br>ಮಾನ್ಯ ಸದಸ್ಯರಾದ ಶ್ರೀಮತಿ ವಸಂತರವರು ಮಾತನಾಡುತ್ತಾ, ಅಂಗನವಾಡಿ ಕೇಂದ್ರಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿಲ್ಲ. ಈ ಬಗ್ಗೆ ಇಲಾಖಾ ಅಧಿಕಾರಿಗಳು ಪರಿಶೀಲನೆ ನಡೆಸಬೇಕೆಂದು ಕೋರಿದರು.<br>ಮಾನ್ಯ ಸದಸ್ಯರಾದ ಶ್ರೀಮತಿ ಎಸ್.ಎಲ್.ನಾಗಮಣಿರವರು ಮಾತನಾಡುತ್ತಾ, ಮಲ್ಲಿಪಟ್ಟಣ ಹೋ: ಶಿರದನಹಳ್ಳಿಯಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರದಲ್ಲಿ ಕಾರ್ಯಕರ್ತೆ ಮಾತ್ರ ಕೆಲಸ ನಿರ್ವಹಿಸುತ್ತಿದ್ದು, ಸಹಾಯಕಿ ಇರುವುದಿಲ್ಲ. ಇದರಿಂದ ಅಂಗನವಾಡಿ ಕಾರ್ಯಕರ್ತೆಯೇ ಮಕ್ಕಳನ್ನು ಕರೆದುಕೊಂಡು ಬರಬೇಕಾಗಿರುತ್ತದೆ, ಊಟ ಮತ್ತು ಪಾಠ ಎರಡನ್ನೂ ಮಾಡಬೇಕಾಗಿರುವುದರಿಂದ, ತುಂಬಾ ಸಮಸ್ಯೆಯಾಗಿರುತ್ತದೆ. ಆದ್ದರಿಂದ, ಅಂಗನವಾಡಿ ಕೇಂದ್ರಕ್ಕೆ ಸಹಾಯಕಿಯನ್ನು ನೇಮಿಸಬೇಕೆಂದು ಕೋರಿದರು.<br>**ಡಿ ದೇವರಾಜು ಅರಸು ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಡಾ; ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ:**<br>ಸಭೆಗೆ ಇಲಾಖಾ ಮುಖ್ಯಸ್ಥರುಗಳೇ ಖುದ್ದಾಗಿ ಸಭೆಗೆ ಹಾಜರಾಗಬೇಕೆಂದು ತಿಳಿಸಲಾಯಿತು. ಮತ್ತು ಅಭಿವೃದ್ಧಿ ನಿಗಮದ ವತಿಯಿಂದ ಅನುಷ್ಠಾನ ಮಾಡುತ್ತಿರುವ ಯೋಜನೆಗಳ ಬಗ್ಗೆ ಸಮಿತಿ ಸದಸ್ಯರುಗಳಿಗೆ ಪೂರ್ಣ ವಿವರಗಳನ್ನು ಒದಗಿಸುವಂತೆ ತಿಳಿಸಲಾಯಿತು. | |
| 1 | 2011-12ನೇ ಸಾಲಿನ ಆರ್ಥಿಕ ವರ್ಷದ ಅನುದಾನದಲ್ಲಿ ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇಲ್ಲಿಗೆ ಎರಡು ಗಣಕಯಂತ್ರ ಹಾಗೂ ಎರಡು ಲೇಸರ್ ಜೆಟ್ ಪ್ರಿಂಟರ್ ಮತ್ತು 4 ಗಂಟೆ ಬ್ಯಾಕ್‌ಅಪ್‌ವುಳ್ಳ ಯು.ಪಿ.ಎಸ್ ಖರೀದಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆ(8)/2011-12 ದಿನಾಂಕ: 28-09-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇವರ ಕಛೇರಿಗೆ ಇಲಾಖಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಹಾಗೂ ಇಲಾಖೆಗೆ ಸಂಬಂಧಿಸಿದ ಸಭೆಗಳ ಮಾಹಿತಿ ಹಾಗೂ ಭಾಗ್ಯಲಕ್ಷ್ಮಿ ಯೋಜನೆಗಳಡಿ ಸಲ್ಲಿಸಬೇಕಾದ ಪ್ರಗತಿ ವರದಿ ಮಾಹಿತಿಗಳನ್ನು ಸಲ್ಲಿಸಲು ಎರಡು ಗಣಕ ಯಂತ್ರ ಹಾಗೂ ಎರಡು ಲೇಸರ್ ಜೆಟ್ ಪ್ರಿಂಟರ್‌ಗಳು ಮತ್ತು 4 ಗಂಟೆ ಬ್ಯಾಕ್ ಅಪ್‌ವುಳ್ಳ ಯು.ಪಿ.ಎಸ್ ಅನ್ನು ಡಿ.ಜಿ.ಎಸ್ ಅಂಡ್ ಡಿ ದರದಲ್ಲಿ ಇಲಾಖಾ ಐಸಿಡಿಎಸ್ ಘಟಕ 2211-00-102-0-02( ಯೋಜನೆ) ಲೆಕ್ಕಶೀರ್ಷಿಕೆಯಡಿ ಆಯವ್ಯಯ ಅಂದಾಜಿನಲ್ಲಿ ವೇತನಕ್ಕಾಗಿ ರೂ.15.61ಲಕ್ಷ ಹಾಗೂ ವೇತನೇತರ ವೆಚ್ಚಕ್ಕಾಗಿ ರೂ.9.39 ಲಕ್ಷ ಒಟ್ಟು ರೂ.25.00ಲಕ್ಷಗಳನ್ನು ನಿಗದಿಪಡಿಸಿದ್ದು, ವೇತನೇತರ ಲೆಕ್ಕಶೀರ್ಷಿಕೆಯಲ್ಲಿ ಉಳಿಕೆಯಾಗುವ ಅನುದಾನದಲ್ಲಿ ಅನುಮೋದಿತ ಸಂಸ್ಥೆಯಿಂದ ನಿಯಮಾನುಸಾರ ಖರೀದಿಸಲು ಅನುಮತಿ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇವರು ಕೋರಿರುವಂತೆ, ಕಛೇರಿಯ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅನುಕೂಲವಾಗುವಂತೆ, ಇಲಾಖಾ ಐಸಿಡಿಎಸ್ ಘಟಕ 2211-00-102-0-02( ಯೋಜನೆ) ಲೆಕ್ಕ ಶೀರ್ಷಿಕೆ ಯಡಿ ವೇತನೇತರಕ್ಕಾಗಿ ನಿಗದಿ ಪಡಿಸಿರುವ ರೂ.9.39 ಲಕ್ಷಗಳಲ್ಲಿ ಉಳಿಕೆಯಾಗುವ ಅನುದಾನದಲ್ಲಿ ಡಿ.ಜಿ.ಎಸ್ ಮತ್ತು ಡಿ ದರದಲ್ಲಿ ನಿಯಮಾನುಸಾರ |

<table>
<tr>
<td></td>
<td></td>
<td></td>
<td>ಎರಡು ಗಣಕ ಯಂತ್ರ ಹಾಗೂ ಎರಡು ಲೇಸರ್ ಜೆಟ್ ಪ್ರಿಂಟರ್‌ಗಳು ಮತ್ತು 4 ಗಂಟೆ ಬ್ಯಾಕ್ ಅಪ್‌ವುಳ್ಳ ಯು.ಪಿ.ಎಸ್ ಅನ್ನು ಖರೀದಿಸಲು ಸಭೆಯಲ್ಲಿ ಸರ್ವಾನುಮತ ದಿಂದ ನಿರ್ಣಯಿಸಲಾಯಿತು.</td>
</tr>
<tr>
<td>2</td>
<td>ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಇಲಾಖೆಯ ಕಟ್ಟಡ ದುರಸ್ಥಿ ಯೋಜನೆಯಡಿ ಕಾಮಗಾರಿಗಳನ್ನು ಬದಲಾವಣೆ ಮಾಡುವ ಬಗ್ಗೆ.</td>
<td>ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, 2011-12ನೇ ಸಾಲಿಗೆ ಅನುಮೋದನೆಗೊಂಡ ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಇಲಾಖೆಯ ಕಟ್ಟಡ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಕೆಳಕಂಡಂತೆ ಬದಲಾವಣೆ ಮಾಡಲು ಸಮಿತಿಯು ಅನುಮೋದನೆ ನೀಡಬೇಕೆಂದು ಕೋರಿದರು.<br>ರೂ.ಲಕ್ಷಗಳಲ್ಲಿ
<table>
<tr><th>ಕ್ರಸಂ</th><th>ಮಂಜೂರಾದ ಕಾಮಗಾರಿ</th><th>ಅಂದಾಜು ಮೊತ್ತ</th><th>ಬದಲಾವಣೆ ಮಾಡಬೇಕಾದ ಕಾಮಗಾರಿ</th><th>ಅಂದಾಜುಮೊತ್ತ</th></tr>
<tr><td colspan="5">ಹಿಂದುಳಿದ ವರ್ಗಗಳ ಇಲಾಖೆಯ ಕಟ್ಟಡ ಕಾಮಗಾರಿಗಳು</td></tr>
<tr><td rowspan="2">1</td><td rowspan="2">ಬೇಲೂರು ತಾ: ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿ.ನಿ. ಕಟ್ಟಡ ದುರಸ್ಥಿ</td><td rowspan="2">2.00</td><td>ಚನ್ನರಾಯಪಟ್ಟಣ ತಾ: ಸರ್ಕಾರಿ ಮೆ. ನಂತರದ ಬಾಲಕಿಯರ ವಿ.ನಿ.ಯ ಕಟ್ಟಡ ದುರಸ್ಥಿ</td><td>1.00</td></tr>
<tr><td>ಚನ್ನರಾಯಪಟ್ಟಣ ತಾ: ಕಲ್ಕೆರೆ ಸ.ಮೆ.ಪೂರ್ವ ವಿದ್ಯಾರ್ಥಿನಿಲಯ ಕಟ್ಟಡ ದುರಸ್ಥಿ</td><td>0.50</td></tr>
<tr><td>2</td><td>ಹಾಸನ ತಾ: ಗಾಡೇನಹಳ್ಳಿ ಸ.ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಕುಡಿಯುವ ನೀರು ಪೂರೈಕೆ ಮತ್ತು ಇತರೆ ಕಾಮಗಾರಿ</td><td>0.50</td><td>ಹಾಸನ ತಾ: ಗಾಡೇನಹಳ್ಳಿ ಸ.ಮೆಟ್ರಿಕ್ ಪೂರ್ವ ಬಾಲಕರ ವಿ.ನಿಲಯ ಕುಡಿಯುವ ನೀರು ಪೂರೈಕೆ ಮತ್ತು ಇತರೆ ಕಾಮಗಾರಿ</td><td>1.00</td></tr>
<tr><td>3</td><td>ಹಾಸನ ಸ.ಮೆಟ್ರಿಕ್ ಪೂರ್ವ ಬಾಲಕರ ವಿ.ನಿಲಯ ಸುಣ್ಣಬಣ್ಣ ಮತ್ತು ಇತರೆ ಕಾಮಗಾರಿ.</td><td>1.00</td><td>ಹಾಸನ ನಗರದ (ಆಕಾಶವಾಣಿ ಪಕ್ಕ) ಸ.ಬಾಲಕಿಯರ ಮೆಟ್ರಿಕ್ ಪೂರ್ವ ವಿ.ನಿಲಯ ಕಟ್ಟಡದ ಅಡುಗೆ ಮನೆ ಸುಣ್ಣಬಣ್ಣ ಮತ್ತು ದುರಸ್ಥಿ</td><td>1.00</td></tr>
<tr><td>4</td><td>ಆಲೂರು ತಾ: ರಾಯರ ಕೊಪ್ಪಲು ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ದುರಸ್ಥಿ</td><td>1.00</td><td>ಅರಸೀಕೆರೆ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಕುಡಿಯುವ ನೀರು ಕಾಮಗಾರಿ</td><td>1.75</td></tr>
</table>
</td>
<td>ಸಭೆಯಲ್ಲಿ ವಿಷಯದ ಬಗ್ಗೆ ಚರ್ಚಿಸಲಾಯಿತು.<br>ಪ್ರಸ್ತಾವನೆಯಲ್ಲಿ ವಿವರಿಸಿರು ವಂತೆ ಹಿಂದುಳಿದ ವರ್ಗಗಳ ಮತ್ತು ಸಮಾಜ ಕಲ್ಯಾಣ ಇಲಾಖೆಯ ಕಟ್ಟಡ ದುರಸ್ಥಿ ಕಾಮಗಾರಿಗಳನ್ನು ಬದಲಾವಣೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸ ಲಾಯಿತು.</td>
</tr>
</table>

| | | | | | | |
|---|---|---|---|---|---|---|
| | 5 | ಅರಸೀಕೆರೆ ತಾ: ಜೆ.ಸಿಪುರ ಮೆಟ್ರಿಕ್ ಪೂವ್ ವಿದ್ಯಾರ್ಥಿನಿಲಯ ದುರಸ್ತಿ | 0.75 | | | |
| | 6 | ಅರಕಲಗೂಡು ಟೌನ್ ಹಳೇ ತಾಲ್ಲೂಕು ಕಛೇರಿ ದುರಸ್ತಿ | 2.00 | ಗಂಗೂರು ಮೆಟ್ರಿಕ್ ಪೂವ್ ಬಾಲಕರ ವಿದ್ಯಾರ್ಥಿನಿಲಯ ದುರಸ್ಥಿ | 2.00 | |
| | | ಒಟ್ಟು | 7.25 | ಒಟ್ಟು | 7.25 | |
| | **ಸಮಾಜ ಕಲ್ಯಾಣ ಇಲಾಖೆ** | | | | | |
| | 1 | ಹಾಸನ ತಾ: ಸ.ಬಾಲಕಿಯರ ವಿ.ನಿಲಯ ಕಾರ್ಲೆ ಸುಣ್ಣಬಣ್ಣ ಶೌಚಾಲಯ ಕಿಟಕಿ ಬಾಗಿಲು ದುರಸ್ಥಿ | 2.00 | ಹಾಸನ ತಾಲ್ಲೂಕು ಸ.ಬಾಲಕಿಯರ ವಿ.ನಿಲಯ ಕಾರ್ಲೆ ಸುಣ್ಣಬಣ್ಣ ಶೌಚಾಲಯ ಕಿಟಕಿ ಬಾಗಿಲು ದುರಸ್ಥಿ | 1.50 | |
| | 2 | ಹಾಸನ ತಾ: ಸ.ಬಾಲಕಯರ ವಿ.ನಿಲಯ ಶೆಟ್ಟಿಹಳ್ಳಿ ಸುಣ್ಣಬಣ್ಣ ಶೌಚಾಲಯ ಕಿಟಕಿ ಬಾಗಿಲು ದುರಸ್ಥಿ | 2.00 | ಹಾಸನ ತಾ: ಸ.ಬಾಲಕಯರ ವಿ.ನಿಲಯ ಶೆಟ್ಟಿಹಳ್ಳಿ ಸುಣ್ಣಬಣ್ಣ ಶೌಚಲಯ ಕಿಟಕಿ ಬಾಗಿಲು ದುರಸ್ಥಿ | 1.50 | |
| | 3 | ಸಕಲೇಶಪುರ ಮೆ.ಪೂರ್ವ ಬಾಲಕರ ವಿ.ನಿಲಯ ಕಿಟಕಿ ಬಾಗಿಲು ದುರ್ಥಿ ಸುಣ್ಣಬಣ್ಣ | 1.00 | ಸಕಲೇಶಪುರ ಮೆ.ಪೂರ್ವ ಬಾಲಕರ ವಿ.ನಿಲಯ ಕಿಟಕಿ ಬಾಗಿಲು ದುರಸ್ಥಿ ಸುಣ್ಣಬಣ್ಣ | 0.50 | |
| | 4 | ಅರಕಲಗೂಡು ತಾ: ಮೆಟ್ರಿಕ್ ಪೂರ್ವ ಬಾಲಕರ ವಿ.ನಿಲಯ, ಕೊಣನೂರು ಕಿಟಕಿ ಬಆಗಿಲು ದುರಸ್ಥಿ ಸುಣ್ಣಬಣ್ಣ | 1.00 | ಅರಕಲಗೂಡು ತಾ: ಮೆಟ್ರಿಕ್ ಪೂರ್ವ ಬಾಲಕರ ವಿ.ನಿಲಯ ಕೊಣನೂರು ಕಿಟಕಿ ಬಾಗಿಲು ದುರಸ್ಥಿ ಸುಣ್ಣಬಣ್ಣ | 0.50 | |
| | | | | ಬೇಲೂರು ತಾ: ಸ.ಮೆಟ್ರಿಕ್ ನಂತರದ ಬಾಲಕಿಯರ ವಿ.ನಿಲಯ ಕಟ್ಟಡ ದುರಸ್ಥಿ | 2.00 | |
| | 5 | ಮೆಟ್ರಿಕ್ ಪೂರ್ವ ಅಂಬೇಡ್ಕರ್ ವಿದ್ಯಾರ್ಥಿನಿಲಯ, ಹಾಸನ | 1.00 | ಸರ್ಕಾರಿ ಕಾಲೇಜು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ (ಆಸ್ಪತ್ರೆ ಮುಂಬಾಗ) ಕಿಟಕಿ ಬಾಗಿಲು ಮತ್ತು ಕಟ್ಟಡದ ದುರಸ್ಥಿ ಹಾಸನ | 1.00 | |
| | | ಒಟ್ಟು | 7.00 | ಒಟ್ಟು | 7.00 | |

| | | | |
|---|---|---|---|
| | ಮಲ್ಲಿಪಟ್ಟಣ ಗ್ರಾಮಕ್ಕೆ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡುವ ಬಗ್ಗೆ. | ಮಾನ್ಯ ಸದಸ್ಯರಾದ ಶ್ರೀಮತಿ ಎಸ್.ಎಲ್.ನಾಗಮಣಿರವರು ಮಾತನಾಡುತ್ತಾ, ಅರಕಲಗುಡು ತಾ: ಮಲ್ಲಿಪಟ್ಟಣ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಡುಬಡವರು ಮತ್ತು ಕೂಲಿ ಕಾರ್ಮಿಕರು ವಾಸಿಸುತ್ತಿದ್ದು, ಅವರ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ, ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಅರಕಲಗೂಡು ತಾ: ಮಲ್ಲಿಪಟ್ಟಣ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕೂಲಿಕಾರ್ಮಿಕರು ಹೆಚ್ಚಾಗಿ ರುವುದರಿಂದ, ಮಲ್ಲಿಪಟ್ಟಣ ಗ್ರಾಮಕ್ಕೆ ಪರಿಶಿಷ್ಟ ಜಾತಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ವನ್ನು ಮಂಜೂರು ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತ ದಿಂದ ನಿರ್ಣಯಿಸಲಾಯಿತು. |
| | | ಮತ್ಯಾವುದೇ ವಿಷಯಗಳು ಚರ್ಚೆಗೆ ಬಾರದ ಹಿನ್ನೆಲೆಯಲ್ಲಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | |

(ಎಂ.ಕೆ.ದ್ಯಾವಯ್ಯ) 26/10

ಅಧ್ಯಕ್ಷರು

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

ಜಿಲ್ಲಾ ಪಂಚಾಯಿತಿ, ಹಾಸನ